1) ಮಾಗಡಿ ತಾಲ್ಲೂಕಿನಲ್ಲಿ ಐ.ಸಿ.ಡಿ.ಎಸ್. ಕಾರ್ಯಕ್ರಮವನ್ನು ಕೈಗೊಂಡಿದೆಯೇ?

2) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು.) :–

1) ಇಲ್ಲ.

2) 8 ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ.

ಮಾಗಡಿಯಲ್ಲಿ ನ್ಯಾಯಾಲಯ ಕಟ್ಟಡದ ಬಗ್ಗೆ

639. ಶ್ರೀ ಹೆಚ್.ಎಂ. ರೇವಣ್ಣ, (ಮಾಗಡಿ ಕ್ಷೇತ್ರ):– ಮಾನ್ಯ ಕಾನೂನು, ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಪಟ್ಟಣದಲ್ಲಿ ನ್ಯಾಯಾಲಯಕ್ಕೆ ಕಟ್ಟಡವು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಹೌದು

ಆ) ಕರ್ನಾಟಕ ಉಚ್ಚ ನ್ಯಾಯಾಲಯದ ಸಮಾಲೋಚನೆಯೊಂದಿಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಬಾಲಭವನಗಳಲ್ಲಿ ಹಣ ದುರುಪಯೋಗವಾಗುತ್ತಿರುವ ಬಗ್ಗೆ

621. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಾಲಭವನಗಳ ಸಂಖ್ಯೆ ಎಷ್ಟು?

ಆ) ಇವುಗಳಿಗಾಗಿ ಖರ್ಚು ಮಾಡಲಾಗುತ್ತಿರುವ ಹಣವೆಷ್ಟು?

ಇ) ಈ ಬಾಲಭವನಗಳಲ್ಲಿ ಹಣ ದುರುಪಯೋಗವಾಗಿರುವ ಪ್ರಕರಣಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಬೆಂಗಳೂರಿನಲ್ಲಿ ಒಂದು ರಾಜ್ಯ ಬಾಲಭವನ, ಮಿನಿ ಬಾಲಭವನಗಳು ಮತ್ತು ಒಂದು ಗ್ರಾಮಾಂತರ ಬಾಲಭವನ ಇರುತ್ತದೆ. 10 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಬಾಲಭವನಗಳು ಕಾರ್ಯನಿರ್ವಹಿಸುತ್ತಿವೆ. ಮತ್ತು ಉಡುಪಿಯಲ್ಲಿ ಒಂದು ತಾಲ್ಲೂಕು ಬಾಲ ಭವನವಿದೆ. (ಪಟ್ಟಿ ಲಗತ್ತಿಸಲಾಗಿದೆ)

ಆ) 1989–90ನೇ ಸಾಲಿನಲ್ಲಿ ನಾಲ್ಕು ಮಿನಿ ಬಾಲಭವನಗಳು ಮತ್ತು ಒಂದು ಗ್ರಾಮಾಂತರ ಬಾಲಭವನ ಸೇರಿದಂತೆ ರಾಜ್ಯ ಬಾಲಭವನಕ್ಕೆ ರೂ.28,70,245.74 ಖರ್ಚು ಮಾಡಲಾಗಿದೆ. ಕೊಡಗು ಜಿಲ್ಲಾ ಬಾಲಭವನಕ್ಕೆ 2.00 ಲಕ್ಷ ರೂ. ಮತ್ತು ಗುಲ್ಬರ್ಗ ಜಿಲ್ಲಾ ಬಾಲಭವನಕ್ಕೆ 1.00 ಲಕ್ಷ ರೂ. ಅನುದಾನವಾಗಿ ನೀಡಲಾಗಿದೆ.

ಇ) – ಇಲ್ಲಾ –

ಈ) ಉದ್ಭವಿಸುವುದಿಲ್ಲ.